## ಕೊರೊನಾ ಯಂತ್ರ

ವಿಚಿತ್ರ ಆದರೂ ಸತ್ಯ! ಮಡಿಕೇರಿಯ ಕೋಟೆ ಆವರಣ ದಲ್ಲಿರುವ ವಸ್ತು ಸಂಗ್ರಹಾಲಯದಲ್ಲಿರುವ ಒಂದು ವಸ್ತುವಿನ ಹೆಸರು ಕುತೂಹಲ ಮೂಡಿಸಿತು.

ಬ್ರಿಟಿಷರ ಕಾಲದ ಒಂದು ಬೆರಳಚ್ಚು ಯಂತ್ರದ ಹೆಸರು ಕೊರೊನಾ! ಅದನ್ನು ನೋಡಿದ ತಕ್ಷಣ ನಮ್ಮನ್ನು ಕನಸಿನಲ್ಲೂ ಬೆಚ್ಚಿ ಬೀಳುವಂತೆ ಮಾಡಿದ ಕೊರೊನ ವೈರಸ್ ನೆನಪಾಗುವುದು ಸಹಜ ಅಲ್ಲವೇ? ಮುಂದಿನ ಸಲ ಮಡಿಕೇರಿಗೆ ಹೋದಾಗ ಈ ವಸ್ತು ಸಂಗ್ರಹಾಲಯ ನೋಡುವುದನ್ನು ಮರೆಯ ಬೇಡಿ!

—ಕೆ.ಎಸ್. ಸವಿತ, ಬೆಂಗಳೂರು.






## ನಾಲ್ಕು ಚಕ್ರದ ಸಿಂಹದ ಗಾಡಿ

50–60 ವರ್ಷಗಳ ಹಿಂದೆ ಅಂಬೆಗಾಲನ್ನು ಬಿಟ್ಟು ಪುಟ್ಟ ಪುಟ್ಟ ಹೆಜ್ಜೆಯನ್ನು ಇಡುವಂತಾದ ಮಕ್ಕಳಿಗೆ ಮೂರು ಕಾಲಿನ ನೂಕುವ ಕೈಗಾಡಿ ದೊರೆಯುತ್ತಿತ್ತು. ಚೆನ್ನಾಗಿ ಹೆಜ್ಜೆ ಇಡುವಂತಾದ ಮೇಲೆ ಪ್ರಾಣಿ ಪಕ್ಷಿಗಳ ನಾಲ್ಕು ಕಾಲಿನ ಗಾಡಿ ಲಭಿಸುತ್ತಿತ್ತು. ಈ ಗಾಡಿಗಳಿಗೆ ದಾರವನ್ನು ಕಟ್ಟಿ ಮಕ್ಕಳು ಆನಂದದಿಂದ ಮನೆಯ ತುಂಬಾ ಎಳೆದಾಡುತ್ತಾ ಸಂಭ್ರಮಿಸುತ್ತಿದ್ದವು. ನಾಲ್ಕು ಚಕ್ರದ ಸಿಂಹದ ಗಾಡಿಯನ್ನು ನೋಡಿದಾಗ ಬಾಲ್ಯದ ನೆನಪು ಮರುಕಳಿಸಿ ಮುದ ನೀಡುವುದಿಲ್ಲವೇ ?

— ಎಸ್.ಎನ್. ಅಶೋಕಕುಮಾರ್,
ಶ್ರವಣಬೆಳಗೊಳ.

## ನೀಲಕಂಠ ಶಿವನಲ್ಲ!

ಇದಕ್ಕೆ ನೀಲಿ ಬಣ್ಣವಿರುವುದರಿಂದ ನೀಲಕಂಠ ಎಂಬ ಹೆಸರಿದೆ. ಇಂಗ್ಲಿಷ್‌ನಲ್ಲಿ ಇಂಡಿಯನ್ ರೋಲರ್ ಎಂದು ಕರೆಯುತ್ತಾರೆ. ಕೊರಾಸಿಡೇ ಕುಟುಂಬಕ್ಕೆ ಸೇರಿದ ಇದರ ವೈಜ್ಞಾನಿಕ ಹೆಸರು ಕೊರಾಸಿಯಸ್ ಬೆಂಗಾಲೆನ್ಸಿಸ್. ಭಾರತ, ಬಂಗ್ಲಾ, ಪಾಕಿಸ್ತಾನ, ಬರ್ಮಾ ಮತ್ತು ಶ್ರೀಲಂಕಗಳಲ್ಲಿ ಕಂಡುಬರುತ್ತದೆ. ಕುರುಚಲು ಕಾಡುಗಳೇ ಇದರ ಆವಾಸಸ್ಥಾನ.

ಪಾರಿವಾಳಕ್ಕಿಂತ ಚಿಕ್ಕದಾಗಿದ್ದು ರೆಕ್ಕೆ, ನೆತ್ತಿ ತಿಳಿನೀಲಿಯಾಗಿರುತ್ತದೆ. ಕೀಟಾಹಾರಿಯಾಗಿದ್ದೂ, ರೈತರಿಗೆ ಉಪಕಾರಿ ಎನಿಸಿದೆ. ಮಾರ್ಚ್ ಜುಲೈ ಅವಧಿ ಇದರ ಸಂತಾನೋತ್ಪತ್ತಿ ಕಾಲ. ಹೆಣ್ಣನ್ನು ಆಕರ್ಷಿಸಲು ಗಂಡು ಆಗಸದಲ್ಲಿ ಗಿರಕಿ ಹೊಡೆಯುತ್ತದೆ. ಇದರಿಂದ ಹೆಣ್ಣು ಅದರತ್ತ ಮೋಹಗೊಂಡು ಕೂಡುತ್ತದೆ. ಮರದ ಪೊಟರೆಯಲ್ಲಿ ಮೃದುವಾದ ವಸ್ತುಗಳನ್ನು ಹರಡಿ ಮೆತ್ತನೆಯ ಗೂಡು ಕಟ್ಟುತ್ತದೆ. ನಾಲ್ಕರಿಂದ ಐದು ಮೊಟ್ಟೆಗಳನ್ನಿಡುತ್ತದೆ.

—ಪ್ರಕಾಶ ಎಸ್.ಮನ್ನಂಗಿ, ಮೋಟೆಬೆನ್ನೂರು

